# ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್  463/2022

ಪಿ-ಡಬ್ಲ್ಯೂ-1

**ದಿನಾಂಕ 30-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಎಸ್.ಕೆ.ಎಮ್. ಪ್ರತಿವಾದಿ ಪರ ವಕೀಲರುಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ನಾನು ಸಲ್ಲಿಸಿರುವ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ನಿಪಿ-15 ಮತ್ತು 16 ರಲ್ಲಿ ಮನೆ ಮತ್ತು ಹಿತ್ತಲು ಇದೆ ಎಂದರೆ ಸರಿಯಲ್ಲ. ನಿಪಿ-5 ಕ್ರಯ ಪತ್ರ ಪುಟ್ಟೇಗೌಡರಿಗೆ ಸೇರಿದ್ದು ಅವರು ಜವರೇಗೌಡರ ಮಾವ. ಸರ್ವೇ ನಂಬರ 430 ಎಂದು ಮಾತ್ರ ನಿಪಿ-5 ರಲ್ಲಿ ನಮೂದಾಗಿದೆ ಎಂದರೆ ಸರಿ.

2. ಪೂರ್ವ ಪಶ್ಚಿಮ 7½ ಗಜ ಉತ್ತರ ದಕ್ಷಿಣ 17 ½ ಗಜ ಎಂದರೆ ಸರಿ. ಎರಡನ್ನು ಕೂಡಿದರೆ 393.75 ಚದರ ಅಡಿಗಳು ಬರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ 3,000 ಚದರ ಅಡಿಗಳು ಬರುವುದಿಲ್ಲ ಎಂದರೆ ಸರಿಯಲ್ಲ. ಪುಟ್ಟೇಗೌಡರಿಗೆ ಕ್ರಯ ಪತ್ರದಂತೆ ಖಾತೆಯಾಗಿರುವ ಬಗ್ಗೆ ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿಯಲ್ಲ. ಎಲ್ಲಿಯೂ ಸಹ ಕ್ರಯದಂತೆ ಖಾತೆಯು ನಮೂದಾಗಿಲ್ಲ ಎಂದರೆ ಸರಿಯಲ್ಲ.

3. ಪುಟ್ಟೇಗೌಡವರು ಖರೀದಿ ಮಾಡಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಪ್ರತಿವಾದಿಗಳು ನಮ್ಮ ಚೆಕ್ ಬಂದಿಯಲ್ಲಿ ಬರುವುದಿಲ್ಲ ಎಂದರೆ ಸರಿ. ಸರ್ವೇ ನಂಬರ 430/7 ಗ್ರಾಮಠಾಣಾಕ್ಕೆ ಸೇರಿದು ಅದರಲ್ಲಿ ಮನೆ ನಿರ್ಮಾಣವಾಗಿದೆ ಎಂದರೆ ಸರಿಯಲ್ಲ.  ಪ್ರತಿವಾದಿಗಳಿಗೆ ವಿನಾಕಾರಣ ತೊಂದರೆ ಕೊಡುವ ಸಲುವಾಗಿ  ಸುಳ್ಳು ದಾವೆಯನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ-9 ರ ಪ್ರಕಾರ  ಮೂಲತ ಸರ್ವೆ ನಂಬರ 430/3 ಕಾಳನಾಯಕ ಹೆಸರಿನಲ್ಲಿದೆ ಎಂದರೇ ಗೊತ್ತಿಲ್ಲ. ಸದರಿ ಸ್ವತ್ತನ್ನು 2 ನೇ ಪ್ರತಿವಾದಿ ಕಾಳನಾಯಕನ ಕುಟುಂಬದ ಸದಸ್ಯರಿಂದ ಖರೀದಿ

ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವತ್ತನ್ನು ಅಕ್ರಮವಾಗಿ ಕಬಳಿಸಲು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ